**ಅಸಲು ದಾವ ಸಂಖ್ಯೆಃ 158/2016**
**ಪಿ.ಡಬ್ಲೂ -2**

ದಿಃ 12.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
**ಮುಂದುವರೆದ ಪಾಟೀ ಸವಾಲು 1 ರಿಂದ 4, 6 ಮತ್ತು 7 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಆರ್ ಪಿ ಎಮ್ ರವರಿಂದಃ-**

1. ದಿಃ 24-06-2023 ರಂದು ನಾನು ನನ್ನ ಮುಂದುವರೆದ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಪ್ರಮಾಣ ಪತ್ರದಲ್ಲಿ ನನ್ನ ವಯಸ್ಸು 45 ವರ್ಷ ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿ. ಪ್ರಸ್ತುತ ದಾವೆಯನ್ನು 2016 ರಲ್ಲಿ ಹೂಡಲಾಗಿದೆ. ನಿಪಿ-9 ರ ನೋಟಿಸಿನ ತಾರೀಕನ್ನು ನನಗೆ ಈಗ ಹೇಳಲು ಬರುವುದಿಲ್ಲ. ನಾವು ಪ್ರತಿವಾದಿಯರೊಂದಿಗೆ ಒಂದು ವ್ಯವಹಾರವನ್ನು ಮಾಡಿದೇವು ಹಾಗೂ ಸದರಿ ವ್ಯವಹಾರದ ಕಡೆಗೆ ಖರೀದಿ ಪತ್ರವನ್ನು ಬರೆದುಕೊಡಬೇಕೆಂದು ಕೇಳಿ ಸದರಿ ನೋಟಿಸನ್ನು ಕಳುಹಿಸಿದ್ದೇವು. ನಿಪಿ-9 ನ್ನು 2015 ನೇ ಇಸವಿಯಲ್ಲಿ ಕಳುಹಿಸಿದ್ದು ಅದಕ್ಕು ಮೊದಲು ನಾನು ಯಾವುದೇ ನೋಟಿಸ ಕಳುಹಿಸಿರಲಿಲ್ಲ ಎಂದರೆ ಸಾಕ್ಷಿಯು ಲಿಖಿತವಾಗಿ ನೋಟಿಸ ಕಳುಹಿಸಿರಲಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ಮೊದಲು ನೊಟಿಸ ನೀಡಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ಪ್ರತಿವಾದಿಯರು ತನ್ನ ಅಣ್ಣತಮ್ಮಂದಿರಾದ ಕಾರಣ ತಾನು ಮೌಖಿಕವಾಗಿ ಕೇಳಿಕೊಳ್ಳುತ್ತಿದ್ದರು ಆದರೆ ಪ್ರತಿವಾದಿಯರು ಅದನ್ನು ಮುಂದೂಡಿಕೊಂಡು ಬರುತ್ತಿದ್ದರು ಎಂದು ನುಡಿಯುತ್ತಾರೆ. ಪ್ರತಿವಾದಿಯರು ಆ ರೀತಿ ಖರೀದಿ ಪತ್ರ ಮಾಡಿಕೊಡುವುದಾಗಿ ಹೇಳಿಕೊಂಡು ಅದನ್ನು ಮುಂದೂಡಿಕೊಂಡು ಬಂದಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ಕರಾರು ಪತ್ರದ ದಿನಾಂಕ 25-05-1999 ಆಗಿರುತ್ತದೆ. ನಾನು ಸದರಿ ದಿನಾಂಕದ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕರಾರ ಪತ್ರದ ನಂತರ ಎಷ್ಟು ಸಮಯ ಕಳೆದ

ನಂತರ ಪ್ರಸ್ತುತ ದಾವೆ ಹೂಡಿರುತ್ತೇನೆ ಎಂದು ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯನ್ನು ಸುಮಾರು 25 ವರ್ಷಗಳ ನಂತರ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ಅಣ್ಣತಮ್ಮಂದಿರು ಪ್ರತ್ಯೇಕವಾಗಿ ವಾಸ ಮಾಡುತ್ತೇವೆ ಎಂದರೆ ಸರಿ. ಆದರೆ ಜಮೀನಿನ ವ್ಯವಸಾಯವನ್ನು ಜಂಟಿಯಾಗಿ ಮಾಡುತ್ತೇವೆ ಎಂದರೆ ಸರಿಯಲ್ಲ. ನನ್ನ ಹಾಗೂ ನನ್ನ ಅಣ್ಣತಮ್ಮಂದಿರ ನಡುವೆ ಬೇರೇ ಆಸ್ತಿಗಳಿಗೆ ಸಂಬಂಧಪಟ್ಟಂತೆ ದಾವೆಗಳು ಇರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಈ ದಾವೆಯಲ್ಲಿರುವ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳ ಕುರಿತು ಬೇರೆ ಯಾವುದೇ ದಾವೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಹಾಗೂ ನನ್ನ ಅಣ್ಣತಮ್ಮಂದಿರ ನಡುವೆ ಒಳ್ಳೆ ಸಂಬಂಧ ಇದ್ದು ನನ್ನ ಅಣ್ಣತಮ್ಮಂದಿರು ದಾವಾ ಸ್ವತ್ತಿಗೆ ಬರುವುದು ಹೋಗುವುದು ಮಾಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾವಾ ಸ್ವತ್ತಿನ ಸ್ವಾಧೀನವನ್ನು ತನ್ನ ಅಣ್ಣ ತಮ್ಮಂದಿರು ತನಗೆ ಬಿಟ್ಟುಕೊಟ್ಟಿದ್ದು ದಾವಾ ಸ್ವತ್ತಿಗೆ ಅವರು ಬರುವುದಿಲ್ಲ ಎಂದು ನುಡಿಯುತ್ತಾರೆ. ಈ ರೀತಿ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಸಾಭೀತುಪಡಿಸಲು ನನ್ನ ಬಳಿ ಯಾವುದೇ ಪುರಾವೆ ಇರುವುದಿಲ್ಲ ಎಂದರೆ ಸರಿಯಲ್ಲ.

3. ಪ್ರತಿವಾದಿಯರ ತಂದೆಯಾದ ಸುಬಹನರಾವ ಪವಾರ ರವರು ಮೇ 1999 ರಲ್ಲಿ ತೀರಿಕೊಂಡಿರುತ್ತಾರೆ. ಅವರ ವಾರಸುದಾರರ ಹೆಸರುಗಳು ದಾವಾ ಸ್ವತ್ತಿನ ಸಿಟಿ ಎಸ್ ಉತಾರಾಗಳಲ್ಲಿ ಯಾವಾಗ ನಮೂದಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಇಲ್ಲಿಯವರೆಗೂ ಸಹ ನನ್ನ ಹಾಗೂ ಪ್ರತಿವಾದಿಯರ ಹಾಗೂ ವಸಂತ ಪವಾರ ರವರ ಹೆಸರು ಸದರಿ ಸಿಟಿ ಎಸ್ ಉತಾರಾದಲ್ಲಿ ನಮೂದಾಗುತ್ತಾ ಬರುತ್ತಿದೆ ಎಂದರೆ ಸರಿ. ಪ್ರತಿವಾದಿಯರ ತಂದೆಗೆ ಇಬ್ಬರು ಸಹೋದರಿಯರು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆ ಹೂಡಲು ಎಷ್ಟು

ವಿಳಂಬವಾಗಿದೆ ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವುದಿಲ್ಲ ಎಂದರೆ ಸರಿ. ಆ ರೀತಿ ನಮೂದು ಮಾಡಿದರೆ ಪ್ರತಿಯೊಂದು ದಿನದ ವಿಳಂಬವನ್ನು ವಿಸ್ತಾರವಾಗಿ ಹೇಳಬೇಕಾಗುತ್ತದೆ ಹಾಗೂ ಅದಕ್ಕೆ ಕಾರಣ ನೀಡಬೇಕಾಗುತ್ತದೆ ಎಂಬ ದುರುದ್ದೇಶದಿಂದ ನಾನು ಅದನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಂದುವರೆದ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕೆಲವು ದಾಖಲೆಗಳನ್ನು ನಾನು ಹಾಜರುಪಡಿಸಿರುವುದಾಗಿ ಹೇಳಿದ್ದು ಅವು ಯಾವ ದಾಖಲೆಗಳು ಎಂದು ಹೇಳಲು ಬರುವುದಿಲ್ಲ. ನಾನು ಈ ದಾವೆಯಲ್ಲಿ ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲಿಗೆ 5 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್ ಆರ್ ಎಲ್ ರವರಿಂದ :</u>**

ಈಗಾಗಲೇ 1 ರಿಂದ 4, 6 ಮತ್ತು 7 ನೇ ಪ್ರತಿವಾದಿ ಪರ ವಕೀಲರು ಈ ದಿನ ಮಾಡಿರುವ ಪಾಟೀ ಸವಾಲನ್ನು ಅನುಮೋದಿಸಿಕೊಳ್ಳುವುದಾಗಿ ನುಡಿಯುತ್ತಾರೆ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**